ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ ಕಟ್ಟಡ ಜಯಂತಿ ನಗರ ವೃತ್ತ ಹೊರಮಾವು/ಕಲ್ಕೆರೆ ಮುಖ್ಯರಸ್ತೆ,
ಹೊರಮಾವು ಗ್ರಾಮ, ಬೆಂಗಳೂರು– 560113

ಸಂಖ್ಯೆ:ಬಿಬಿಎಂಪಿ/ಸ.ಕಾ.ಅ/ಹೊಉವಿ/ಪಿಆರ್/ /2021–22 ದಿನಾಂಕ: 20.11.2021

ಮಾನ್ಯ ಆಯುಕ್ತರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕಛೇರಿ ಆದೇಶ ಸಂಖ್ಯೆ:ಬಿ12(5)ಪಿಆರ್/15/ 2020–21 ದಿನಾಂಕ:21/09/2020 ರ ಆದೇಶದಂತೆ ಹೊರಮಾವು ವಾರ್ಡ್ ಸಂಖ್ಯೆ–25 ರ ನೋಡಲ್ ಅಧಿಕಾರಿಯಾದ ಶ್ರೀಮತಿ.ಸರೋಜಾದೇವಿ ಉಪ ಆಯುಕ್ತರು (ಮಹದೇವಪುರ) ರವರ ಅಧ್ಯಕ್ಷತೆಯಲ್ಲಿ ದಿನಾಂಕ:–20.11.2021 ರಂದು ಬೆಳಗ್ಗೆ 11.00 ಗಂಟೆಗೆ ಹೊರಮಾವು ಉಪವಿಭಾಗದ ವಾರ್ಡ್–25 ರ ಕಛೇರಿಯಲ್ಲಿ ಸಭೆಯನ್ನು ಏರ್ಪಡಿಸಲಾಗಿದ್ದು, ಸಭೆಯ ನಡವಳಿಗಳು ಈ ಕೆಳಕಂಡಂತಿರುತ್ತವೆ.

ಉಪಸ್ಥಿತರು:

| ಕ್ರ.ಸಂ | ಹೆಸರು | ಹುದ್ದೆ | ಮೊಬೈಲ್ ಸಂಖ್ಯೆ |
|---|---|---|---|
| | | ಅಧಿಕಾರಿಗಳು | |
| 1 | ಶ್ರೀಮತಿ.ಸರೋಜಾದೇವಿ | ನೋಡಲ್ ಅಧಿಕಾರಿ ವಾ.ನಂ.25 ಹಾಗೂ ಉಪ–ಆಯುಕ್ತರು (ಮಹದೇವಪುರ) | 9480684059 |
| 2 | ಶ್ರೀ.ಚಂದ್ರಶೇಖರ್.ಎ.ಪಿ | ಸ.ಕಾ.ಅ (ಹೊರಮಾವು ಉಪ–ವಿಭಾಗ) | 98[illegible]7466 |
| 3 | ಶ್ರೀ.ರಮೇಶ್ | ಕಿರಿಯ ಅಭಿಯಂತರರು | |
| 4 | ಶ್ರೀ.ಸಂಜಯ್ ಪವಾರ್ | ಹಿರಿಯ ಆರೋಗ್ಯ ನಿರೀಕ್ಷಕರು | |
| 5. | ಶ್ರೀ.ಹರೀಶ್ | ಕಿರಿಯ ಆರೋಗ್ಯ ನಿರೀಕ್ಷಕರು | |
| 6. | ಶ್ರೀ.ದಿನೇಶ್ | ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಓ.ಎಂ.ಸಿ ರಸ್ತೆ. | |
| 7. | ಶ್ರೀ.ನಂಜಪ್ಪ, ಶ್ರೀ.ಆರ್ಮುಗಂ, ಶ್ರೀ.ದಾಮೋದರನ್ | ಅಧ್ಯಕ್ಷರು, ಸರ್.ಎಂ.ವಿ ನಗರ ವೆಲ್‌ಫೇರ್ ಅಸೋಸಿಯೇಷನ್ | |
| 8. | ಶ್ರೀ.ರಾಜೇಶ್ | ಪಾರ್ಮ್ ಲ್ಯಾಂಡ್ ಲೇಔಟ್, ಕ್ಯಾಲಸನಹಳ್ಳಿ | |
| 9. | ಶ್ರೀ.ವೆಂಕಟೇಶ್ | ಬಂಜಾರ ಬಡಾವಣೆ | |

ಮಾನ್ಯ ನೋಡಲ್ ಅಧಿಕಾರಿ/ಉಪ ಆಯುಕ್ತರು (ಮಹದೇವಪುರ) ರವರ ಸಮ್ಮುಖದಲ್ಲಿ ಸಭೆಗೆ ಹಾಜರಾದ ಎಲ್ಲಾ ಇಲಾಖೆಯ ಅಧಿಕಾರಿ/ಸಿಬ್ಬಂದಿ ಇತರೆ ಸಂಘ ಸಂಸ್ಥೆಗಳು ಸಾರ್ವಜನಿಕರಿಗೆ ಸುಸ್ವಾಗತ ಕೋರುತ್ತಾ, ಬಿಬಿಎಂಪಿ ವಾರ್ಡ್ ನಂ.25 ರ ವ್ಯಾಪ್ತಿಯಲ್ಲಿ ಅಭಿವೃದ್ಧಿ ಕಾರ್ಯ, ಮೂಲಭೂತ ಸೌಕರ್ಯಗಳಾದ ಘನತ್ಯಾಜ್ಯ ವಸ್ತುಗಳ ನಿರ್ವಹಣೆ, ಸಾರ್ವಜನಿಕ ಆರೋಗ್ಯ, ನಗರದ ಸ್ವಚ್ಛತೆ, ರಸ್ತೆ ನಿರ್ವಹಣೆ, ಬೃಹತ್ ನೀರುಗಾಲುವೆಗಳ ನಿರ್ವಹಣೆ, ಬೀದಿ ದೀಪಗಳ ನಿರ್ವಹಣೆ, ಕಲ್ಯಾಣ ಕಾರ್ಯಕ್ರಮಗಳು, 110 ಹಳ್ಳಿಗಳ ವ್ಯಾಪ್ತಿಯಲ್ಲಿ ಬಿಡಬ್ಲ್ಯೂಎಸ್‌ಎಸ್‌ಬಿ ರವರು ಕೊಳವೆ ಸಾಲುಗಳ ಅಳವಡಿಸುತ್ತಿರುವ ಸಂಬಂಧ ಹಾಗೂ ಸಾರ್ವಜನಿಕರ ಸಮಸ್ಯೆ ಕುಂದುಕೊರತೆಗಳನ್ನು ಬಗೆಹರಿಸುವಲ್ಲಿ ಅಗತ್ಯ ಕ್ರಮ ಕೈಗೊಳ್ಳಲು ಸಂಬಂಧಪಟ್ಟ ಎಲ್ಲಾ ಇಲಾಖೆಯ ಅಧಿಕಾರಿ ಹಾಗೂ ಸಾರ್ವಜನಿಕರಿಗೆ ಸುಸ್ವಾಗತ ಕೋರಿ ಸಭೆಯನ್ನು ಆರಂಭಿಸಿದರು.

ವಾರ್ಡ್ ಸಮಸ್ಯೆಗಳ ಬಗ್ಗೆ ಚರ್ಚೆ:–

ಶ್ರೀ.ನಂಜಪ್ಪ, ಶ್ರೀ.ಆರ್ಮುಗಂ, ಶ್ರೀ.ದಾಮೋದರನ್ ಸರ್.ಎಂ.ವಿ ನಗರ ವೆಲ್‌ಫೇರ್ ಅಸೋಸಿಯೇಷನ್:– ರವರು ಮಾತನಾಡಿ ಸರ್.ಎಂ.ವಿ ನಗರ 4ನೇ ಮುಖ್ಯರಸ್ತೆಯಲ್ಲಿ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ ರಸ್ತೆಯಲ್ಲಿ 4 ಇಂಚು ಗಾತ್ರದ ಒಳಚರಂಡಿ ಕೊಳವೆಸಾಲನ್ನು ಅಳವಡಿಸಿದ್ದು, ಇದರ ಸಾಮರ್ಥ್ಯ ಅಸಮರ್ಪಕವಾಗಿದ್ದು, ಒಳಚರಂಡಿ ನೀರು ಸಾಮರ್ಥ್ಯ ಸಾಲದೆ ರಸ್ತೆಯಲ್ಲಿ ಉಕ್ಕಿ ಹರಿಯುತ್ತಿದ್ದು, ಇದನ್ನು ಬದಲಾಯಿಸಿಕೊಡಲು ಅಥವಾ ರಸ್ತೆಯ ಮೇಲೆ ಒಳಚರಂಡಿ ನೀರು ಹರಿಯದಂತೆ ಕ್ರಮವಹಿಸಲು ಮತ್ತು 16 & 17ನೇ ಅಡ್ಡರಸ್ತೆಯಲ್ಲಿ ಕಾವೇರಿ ನೀರು ಸರಿಯಾಗಿ ಬಿಡುತ್ತಿರುವುದಿಲ್ಲ. ಪರಿಶೀಲಿಸಿ ಕ್ರಮವಹಿಸಲು ಕೋರಿರುತ್ತಾರೆ. ಮತ್ತು 4ನೇ ಮುಖ್ಯರಸ್ತೆಯ ಮುಖ್ಯದ್ವಾರದ ಖಾಲಿ ನಿವೇಶನದಲ್ಲಿ ಕೆಲವರು ಕಸವನ್ನು ತಂದು ಹಾಕುತ್ತಿದ್ದು, ಈ ಬಗ್ಗೆ ಕ್ರಮ ವಹಿಸಲು ಕೋರಿರುತ್ತಾರೆ. ಮತ್ತು ಪತ್ರದ ಮುಖಾಂತರ ಮನವಿ ಮಾಡಿದ್ದು, ವಾರ್ಡ್ ಕಮಿಟಿಗೆ ಬೇರೆ ವಿಭಾಗಗಳ ಅಧಿಕಾರಿಗಳು ಇದುವರೆವಿಗೂ ಭಾಗವಹಿಸದಿರುವ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿರುತ್ತಾರೆ. ಬಡಾವಣೆಯಲ್ಲಿ ಕಳ್ಳತನವಾಗುತ್ತಿದ್ದು, ಸಾರ್ವಜನಿಕರು ಅಲ್ಲಲ್ಲಿ ಕಸ ಹಾಕುತ್ತಿದ್ದು, ಸಿ.ಸಿ.ಕ್ಯಾಮೆರಾ ಅಳವಡಿಸಲು ಕೋರಿರುತ್ತಾರೆ. ಹಾಗೂ ಬಡಾವಣೆಯಲ್ಲಿ ನಾಯಿಗಳ ಹಾವಳಿ ಹೆಚ್ಚಾಗಿದ್ದು, ಈ ಕುರಿತು ಸಂಬಂಧಿಸಿದ ಅಧಿಕಾರಿಗಳು ಕ್ರಮ ವಹಿಸಲು ಕೋರಿರುತ್ತಾರೆ. ಮತ್ತು 4ನೇ ಮುಖ್ಯರಸ್ತೆಯಲ್ಲಿ ಗುಂಡಿಗಳು ಬಿದ್ದಿದ್ದು ತುರ್ತಾಗಿ ಗುಂಡಿಗಳನ್ನು ಮುಚ್ಚಿಕೊಡಲು ಕೋರಿರುತ್ತಾರೆ. ಬಡಾವಣೆಯಲ್ಲಿ ವಿದ್ಯುತ್ ವ್ಯತ್ಯಯ ಆಗುತ್ತಿದ್ದು, ಈ ಕುರಿತು ಬೆಸ್ಕಾಂ ಅಧಿಕಾರಿಗಳಿಗೆ ತಿಳಿಸಿದರೂ ಸಹ ಯಾವುದೇ ಕ್ರಮ ವಹಿಸಿರುವುದಿಲ್ಲ. ಮತ್ತು ಯಾವುದೇ ಸಭೆಗಳಿಗೂ ಸಹ ಬೆಸ್ಕಾಂ ಇಂಜಿನಿಯರ್‌ಗಳು ಭಾಗವಹಿಸಿರುವುದಿಲ್ಲ.

ಕ್ರಮ:- ಸಹಾಯಕ ಅಭಿಯಂತರರು, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಪಾಲಿಕೆ ಹಾಗೂ ಹಿರಿಯ/ಕಿರಿಯ ಆರೋಗ್ಯ ನಿರೀಕ್ಷಕರು, ಹೊರಮಾವು ವಾರ್ಡ್ ಸಂಖ್ಯೆ-25, ಸಹಾಯಕ ಕಾರ್ಯಪಾಲಕ ಅಭಿಯಂತರರು ಹೊರಮಾವು ಉಪ-ವಿಭಾಗ ಮತ್ತು ಸಹಾಯಕ ಅಭಿಯಂತರರು ಹಿರಿಯ ಆರೋಗ್ಯ ನಿರೀಕ್ಷಕರು ಹೊರಮಾವು ರವರಿಗೆ ಕ್ರಮ ಕೈಗೊಳ್ಳಲು ಸಭೆಯಲ್ಲಿ ಸೂಚಿಸಲಾಯಿತು.

ಶ್ರೀ ರಾಯಲ್ ಪಾರ್ಕ್ ಲ್ಯಾಂಡ್ ಲೇಔಟ್, ಕ್ಯಾಲಸನಹಳ್ಳಿ ಗ್ರಾಮ:- ರವರು ಮಾತನಾಡಿ ಕ್ಯಾಲಸನಹಳ್ಳಿ ಗ್ರಾಮದ ಪಾರ್ಕ್ ಲ್ಯಾಂಡ್ ಬಡಾವಣೆಯಲ್ಲಿ ಇತ್ತೀಚಿನ ದಿನಗಳಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ ವತಿಯಿಂದ ಒಳಚರಂಡಿ ಕಾಮಗಾರಿಯನ್ನು ಅಳವಡಿಸಲು ರಸ್ತೆಗಳನ್ನು ಅಗೆದಿದ್ದು, ಎಲ್ಲಾ ರಸ್ತೆಗಳು ಸಂಪೂರ್ಣ ಹಾಳಾಗಿದ್ದು, ಈ ರಸ್ತೆಗಳನ್ನು ತುರ್ತಾಗಿ ದುರಸ್ತಿ ಪಡಿಸಿಕೊಡಲು ಕೋರಿರುತ್ತಾರೆ.

ಕ್ರಮ:- ಸಹಾಯಕ ಕಾರ್ಯಪಾಲಕ ಅಭಿಯಂತರರು, ಸಹಾಯಕ ಅಭಿಯಂತರರು, ಹೊರಮಾವು, ಹೊರಮಾವು ಉಪ-ವಿಭಾಗ ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರಿಗೆ ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.

ಶ್ರೀ ವೆಂಕಟೇಶ್ ಬಂಜಾರ ಬಡಾವಣೆ ವೆಲ್‌ಫೇರ್ ಅಸೋಸಿಯೇಷನ್:- ರವರು ಮಾತನಾಡಿ ಬಂಜಾರ ಬಡಾವಣೆಯ ಮುಖ್ಯರಸ್ತೆಯನ್ನು ಆದಷ್ಟು ಬೇಗ ಡಾಂಬರು ಮಾಡಿಸಿಕೊಡಲು ಕೋರಿರುತ್ತಾರೆ ಮತ್ತು ಇಂಜಿನಿಯರ್‌ಗಳು ಮತ್ತು ಆರೋಗ್ಯ ನಿರೀಕ್ಷಕರುಗಳು ಸಮರ್ಪಕವಾಗಿ ಕೆಲಸ ನಿರ್ವಹಿಸುತ್ತಿರುವುದಾಗಿ ಅಭಿನಂದನೆ ಸಲ್ಲಿಸಿರುತ್ತಾರೆ.

ಕ್ರಮ:- ಸಹಾಯಕ ಅಭಿಯಂತರರು, ಹೊರಮಾವು ಸಹಾಯಕ ಕಾರ್ಯಪಾಲಕ ಅಭಿಯಂತರರು, ಹೊರಮಾವು ಉಪ-ವಿಭಾಗ, ರವರಿಗೆ ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.

ಹೊರಮಾವು ಉಪ-ವಿಭಾಗಕ್ಕೆ ಸಂಬಂಧಿಸಿದಂತೆ ಬೃಹತ್ ರಸ್ತೆಗಳ ವಿಭಾಗ, ಬಾಣಸವಾಡಿ, ಸಂಚಾರ ಆರಕ್ಷಕ ಸಿಬ್ಬಂದಿಗಳು- ರಾಮಮೂರ್ತಿನಗರ, ಹೆಣ್ಣೂರು ಪೋಲೀಸ್‌ಠಾಣೆ, ಆರಕ್ಷಕ ಸಿಬ್ಬಂದಿಗಳು ಸಂಚಾರ ವಿಭಾಗ-ಕೆ.ಆರ್.ಪುರ, ರಾಮಮೂರ್ತಿನಗರ, ಬಾಣಸವಾಡಿ ಹಾಗೂ ಸಹಾಯಕ ಅಭಿಯಂತರರು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ರವರಿಗೆ ಈ ದಿನ ಸಭೆಗೆ ಹಾಜರಾಗಲು ಸೂಚಿಸಿದ್ದರೂ ಸಹ ಸದರಿ ರವರು ಗೈರುಹಾಜರಾಗಿದ್ದು, ಈ ಕುರಿತು ಸಾರ್ವಜನಿಕರು ಸಭೆಗೆ ಹಾಜರಾಗದ ಅಧಿಕಾರಿಗಳ ವಿರುದ್ಧ ಅಸಮಧಾನ ವ್ಯಕ್ತಪಡಿಸಿ ಮುಂದಿನ ಸಭೆಯಲ್ಲಿ ಎಲ್ಲರೂ ಹಾಜರಾಗಲೂ ಕ್ರಮಕೈಗೊಳ್ಳಲು ಕೋರಿಕೊಂಡಿದ್ದು, ಸಭೆಯನ್ನು ಮುಕ್ತಾಯಗೊಳಿಸುವ ಸಲುವಾಗಿ ಕೊನೆಯದಾಗಿ ಸ.ಕಾ.ಅ ಹೊರಮಾವು ಉಪ-ವಿಭಾಗ ರವರು ಸಭೆಯಲ್ಲಿ ಸುರಿತ ಸಲಹೆ ಸೂಚನೆಗಳನ್ನು ಚರ್ಚಿಸಿದ್ದಕ್ಕೆ ಧನ್ಯವಾದಗಳನ್ನು ತಿಳಿಸುತ್ತಾ, ವಾರ್ಡ್‌ನ್ನು ಸಮಗ್ರವಾಗಿ ಅಭಿವೃದ್ಧಿಪಡಿಸುವ ಬಗ್ಗೆ ವಾರ್ಡ್ ಮಟ್ಟದಲ್ಲಿ ಕಾರ್ಯಯೋಜನೆಯನ್ನು ರೂಪಿಸಿಕೊಂಡು ಕ್ರಮವಹಿಸುವುದಾಗಿ ತಿಳಿಸುತ್ತಾ, ವಂದನೆಗಳೊಂದಿಗೆ ನೋಡಲ್ ಅಧಿಕಾರಿಗಳ ಅಪ್ಪಣೆ ಮೇರೆಗೆ ಸಭೆಯನ್ನು ಮುಕ್ತಾಯಗೊಳಿಸಿದರು.

M. Sah

ನೋಡಲ್ ಅಧಿಕಾರಿ ವಾರ್ಡ್ ನಂ.25
ಹಾಗೂ ಉಪ ಆಯುಕ್ತರು
(ಮಹದೇವಪುರ) ವಲಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಿರಿಯ ಅಭಿಯಂತರರು
ಹೊರಮಾವು ವಾರ್ಡ್‌ಸಂಖ್ಯೆ-25
ಬಿ.ಬಿ.ಎಂ.ಪಿ

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

**ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ, ಹೊರಮಾವು ಉಪ ವಿಭಾಗ,**

**ಮಹದೇವಪುರ ವಲಯ, ಬೆಂಗಳೂರು – 560 113.**

ಸಂಖ್ಯೆ:ಸ.ಅ/ವಾರ್ಡ್-25/ಹೊ.ಆರ್/ /2021-22 ದಿನಾಂಕ:- 17.11.2021

## "ಸಭಾ ಸೂಚನಾ ಪತ್ರ"

ವಿಷಯ:- ದಿನಾಂಕ:20.11.2021 ಶನಿವಾರ ಪೂರ್ವಾಹ್ನ 11.30 ಗಂಟೆಗೆ ಹೊರಮಾವು ಉಪವಿಭಾಗ ವಾರ್ಡ್ ನಂ.25 ರ ಕಛೇರಿಯಲ್ಲಿ ನಡೆಯುವ ಸಭೆಗೆ ಹಾಜರಾಗುವ ಬಗ್ಗೆ.

ಉಲ್ಲೇಖ:-ಮಾನ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕಛೇರಿ ಆದೇಶ ಸಂಖ್ಯೆ:ಬಿ12(5)ಪಿಆರ್/35/2020-21, ದಿನಾಂಕ:21/09/2020.

**********

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ವ್ಯಾಪ್ತಿಯಲ್ಲಿ ಅಭಿವೃದ್ಧಿ ಕಾರ್ಯ, ಮೂಲಭೂತ ಸೌಕರ್ಯಗಳಾದ ಘನತ್ಯಾಜ್ಯ ವಸ್ತುಗಳ ನಿರ್ವಹಣೆ, ಸಾರ್ವಜನಿಕ ಆರೋಗ್ಯ, ನಗರದ ಸ್ವಚ್ಛತೆ, ರಸ್ತೆ ನಿರ್ವಹಣೆ, ಬೃಹತ್ ನೀರುಗಾಲುವೆಗಳ ನಿರ್ವಹಣೆ, ಬೀದಿ ದೀಪಗಳ ನಿರ್ವಹಣೆ, ಕಲ್ಯಾಣ ಕಾರ್ಯಕ್ರಮಗಳು, 110 ಹಳ್ಳಿಗಳ ವ್ಯಾಪ್ತಿಯಲ್ಲಿ ಬಿಡಬ್ಲ್ಯೂಎಸ್ಎಸ್‌ಬಿ ರವರು ಕೊಳವೆ ಸಾಲುಗಳ ಅಳವಡಿಸುತ್ತಿರುವ ಸಂಬಂಧ ಹಾಗೂ ಸಾರ್ವಜನಿಕರ ಸಮಸ್ಯೆ ಕುಂದುಕೊರತೆಗಳನ್ನು ಬಗೆಹರಿಸುವಲ್ಲಿ ಅಗತ್ಯ ಕ್ರಮ ಕೈಗೊಳ್ಳಲು ಹಾಗೂ ಎಲ್ಲಾ ಇಲಾಖೆಯ ಅಧಿಕಾರಿಗಳು ವಾರ್ಡ್ ನಂ.25 ರ ಹೊರಮಾವು ಉಪವಿಭಾಗಕ್ಕೆ ಸಂಬಂಧಿಸಿದ ಮಾಹಿತಿಗಳೊಂದಿಗೆ ದಿನಾಂಕ:20.11.2021 ಶನಿವಾರ ಪೂರ್ವಾಹ್ನ 11.30 ಗಂಟೆಗೆ ವಾರ್ಡ್ ನಂ.25 ರ ಸ.ಕಾ.ಅ ಹೊರಮಾವು ಕಛೇರಿಗೆ ಹಾಜರಾಗಲು ಕೋರಲಾಗಿದೆ.

<u>ವಿಶೇಷ ಸೂಚನೆ:-</u> Covid-19 ಇರುವುದರಿಂದ ಎಲ್ಲಾರು ಕಡ್ಡಾಯವಾಗಿ ಸ್ಯಾನಿಟೈಜರ್ ಬಳಸಿ, ಮಾಸ್ಕ್ ಧರಿಸಬೇಕು ಮತ್ತು ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳುವುದು.

ಸಂಚಾಲಕರು
ಮತ್ತು ಸಹಾಯಕ ಅಭಿಯಂತರರು
ಹೊರಮಾವು ವಾರ್ಡ್ ಸಂಖ್ಯೆ-25.

ರವರಿಗೆ,

1. ಕಾರ್ಯಪಾಲಕ ಅಭಿಯಂತರರು, ಕೆ.ಆರ್.ಪುರ ವಿಭಾಗ, ಬಿಬಿಎಂಪಿ.
2. ಕಾರ್ಯಪಾಲಕ ಅಭಿಯಂತರರು, ವಿದ್ಯುತ್ (ಮಹದೇವಪುರ ವಲಯ) ಬಿಬಿಎಂಪಿ.
3. ಕಾರ್ಯಪಾಲಕ ಅಭಿಯಂತರರು, ಬಿಡಬ್ಲ್ಯೂಎಸ್ಎಸ್‌ಬಿ, ಸಿಎಂಸಿ
4. ಕಾರ್ಯಪಾಲಕ ಅಭಿಯಂತರರು, ಬಿಡಬ್ಲ್ಯೂಎಸ್ಎಸ್‌ಬಿ, 110 ಹಳ್ಳಿಗಳ ವ್ಯಾಪ್ತಿ.
5. ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ.
6. ಕಾರ್ಯಪಾಲಕ ಅಭಿಯಂತರರು, ರಸ್ತೆ ಮತ್ತು ಮೂಲಭೂತ ಸೌಕರ್ಯಗಳು ಬಿಬಿಎಂಪಿ.
7. ಕಾರ್ಯಪಾಲಯ ಅಭಿಯಂತರರು, ಕೆರೆಗಳ ವಿಭಾಗ, ಬಿಬಿಎಂಪಿ.
8. ಕಾರ್ಯಪಾಲಯ ಅಭಿಯಂತರರು, ಬೃಹತ್ ನೀರುಗಾಲುವೆ ವಿಭಾಗ, ಬಿಬಿಎಂಪಿ.
9. ಆರೋಗ್ಯ ವೈದ್ಯಾಧಿಕಾರಿಗಳು, ಕೆ.ಆರ್.ಪುರ.
10. ಸಹಾಯಕ ನಿರ್ದೇಶಕರು, ನಗರ ಯೋಜನೆ, ಮಹದೇವಪುರ ವಲಯ, ಬಿಬಿಎಂಪಿ.
11. ಡಾ//ಶಿವಕುಮಾರ್, ಆರೋಗ್ಯಾಧಿಕಾರಿಗಳು, ಕೆ.ನಾರಾಯಣಪುರ ಪ್ರಾಥಮಿಕ ಆರೋಗ್ಯ ಕೇಂದ್ರ.
12. ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ನಿರ್ವಹಣಾ ವಿಭಾಗ, ಕೆ.ಆರ್.ಪುರ.
13. ಸಹಾಯಕ ಕಾರ್ಯಪಾಲಕ ಅಭಿಯಂತರರು, ಹೊರಮಾವು ಉಪವಿಭಾಗ, ಬಿಬಿಎಂಪಿ.
14. ಕಾರ್ಯಪಾಲಕ ಅಭಿಯಂತರರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಆರ್.ಟಿ.ನಗರ.
15. ಕಲ್ಯಾಣಾಧಿಕಾರಿಗಳು, ಮಹದೇವಪುರ ವಲಯ, ಬಿಬಿಎಂಪಿ.
16. ಪೊಲೀಸ್‌ಠಾಣೆ ಅಧಿಕಾರಿ ಹೆಣ್ಣೂರು/ಕೊತ್ತನೂರು/ರಾಮಮೂರ್ತಿನಗರ.
17. ಪೊಲೀಸ್ ಇನ್ಸ್‌ಪೆಕ್ಟರ್, ಲಾ ಅಂಡ್ ಆರ್ಡರ್ ರಾಮಮೂರ್ತಿನಗರ/ಕೊತ್ತನೂರು/ಹೆಣ್ಣೂರು ಪೊಲೀಸ್ ಠಾಣೆ. /ಟ್ರಾಫಿಕ್
18. ಪೊಲೀಸ್ ಇನ್ಸ್‌ಪೆಕ್ಟರ್, ಸಂಚಾರ ವಿಭಾಗ, ಬಾಣಸವಾಡಿ/ಕೆ.ಆರ್.ಪುರ.
19. ಕಛೇರಿ ಪ್ರತಿ.